
ಕವಿತೆ

# ಪ್ರಿಯ ಗೋಡೆಯೇ...



ಗೋಡೆಯೇ ನಿನ್ನ ಮೇಲೆ ನನಗೇನೂ ಸಿಟ್ಟಿಲ್ಲ
ಮಣ್ಣೊ ಸಿಮೆಂಟೊ ಇಟ್ಟಿಗೆಯೊ ಕಾಂಕ್ರೀಟೊ ಮತ್ತೊಂದೊ
ಏನನ್ನಾದರೂ ಸೇರಿಸಿಕೊಂಡು ಮೇಲೇಳು
ನನ್ನದೇನೂ ಅಭ್ಯಂತರವಿಲ್ಲ

ಈ ಮನೆಯ ಸರಸ–ಸಲ್ಲಾಪ, ವಿರಸ–ವಿಕಾರ
ಎಲ್ಲವೂ ಇಲ್ಲಿಂದಾಚೆ ತಲುಪದ ಹಾಗೆ ಕಾಪಿಟ್ಟ
ನಿನ್ನ ಮೇಲೆ ಅಭಿಮಾನವೂ ಇದೆ
ಹಾಗಂತ ಬೀಗದಿರು
ನನ್ನ ಬದುಕಿಗೊಂದು ಆಕಾರ ದಯಪಾಲಿಸಿದ ಗೋಡೆಯೇ...

ನಿರ್ಜೀವ ಗೋಡೆ ನೀನು
ಜಾತಿಯಾಗಿಯೋ, ದೇಶವೊಂದರ ಗಡಿಯಾಗಿಯೋ
ಹೆಣ್ಣೊಬ್ಬಳು ದಾಟಬಾರದ ಗೆರೆಯಾಗಿಯೋ
ಎದ್ದು ನಿಂತು ಮೇಲೆ ಬಿದ್ದಾಗ
ನಿನ್ನ ಮುದ್ದಿಸುವುದಾದರೂ ಹೇಗೆ

ಪ್ರಿಯ ಗೋಡೆಯೇ
ನೀನೀಗ ಈ ಜಗವ ಕಾಡುವ
ಸರ್ವಾಧಿಕಾರಿಗಳ ಐಲು ದೊರೆಗಳ
ಸಮಾಧಿಯಾಗಿ ಎದ್ದು ನಿಂತರೆ
ಮತ್ತೊಮ್ಮೆ ನಿನಗೆ ನಮಿಸುವೆ
ಮೊದಲಿನಂತೆ ನಿನ್ನ ಪ್ರೀತಿಸುವೆ

● ಎಚ್.ಕೆ. ಶರತ್
ಕಲೆ: ವಾಗೀಶ ಹೆಗಡೆ

